ದಿನಾಂಕಃ 21-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಎಂ ಟಿ ಎಸ್ ವಕೀಲರಿಂದಃ

1972 ರಲ್ಲಿ ನನಗೆ 4 ವರ್ಷ ವಯಸ್ಸಾಗಿದ್ದು ನಾನು 1968 ರಲ್ಲಿ ಜನಿಸಿರುತ್ತೇನೆ. ದಾವಾಸ್ತಿಯನ್ನು ನನ್ನ ತಂದೆ 1972 ರಲ್ಲಿ ಕ್ರಯಕ್ಕೆ ಕೊಂಡ ಕಾಲಕ್ಕೆ ಖಾಲಿ ಜಾಗವಾಗಿತ್ತು ಎಂದರೆ ಸರಿ. ಸದರಿ ಖಾಲಿ ಜಾಗದಲ್ಲಿ ವಾಸದ ಮನೆಯನ್ನು ಯಾವ ಸಾಲಿನಲ್ಲಿ ಕಟ್ಟಿರುತ್ತೇನೆ ಎಂದು ನನಗೆ ನೆನಪಿಲ್ಲ. ಸದರಿ ವಾಸದ ಮನೆಯನ್ನು ನನ್ನ ತಂದೆ ಕಟ್ಟಿದ್ದು ಪರವಾನಿಗೆ ಪಡೆದು ಕಟ್ಟಿರುತ್ತಾರೆ. ಸದರಿ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾಸ್ತಿಯ ವಿಸ್ತೀರ್ಣದ ಕುರಿತು ಪಂಚಾಯತಿ ದಾಖಲೆಗಳಲ್ಲಿ ನಮೂದು ಇದೆ. 2021-22 ನೇ ಸಾಲಿನ ದಾಖಲೆಗಳಲ್ಲಿ ನಮೂದು ಇದೆ. ದಾವಾಸ್ತಿಯನ್ನು ಖರೀದಿಸುವ ಸಮಯಕ್ಕೆ ಖಾನೆ ಸುಮಾರಿ ನಂ 73 ಎಂದು ಇತ್ತು. ಪ್ರಸ್ತುತ ಸಹ ಖಾತೆ ನಂ 73 ಎಂದೇ ನಮೂದು ಇದೆ.

ನಮ್ಮತಂದೆ ಆಸ್ತಿಯನ್ನು ರಾಮಲಿಂಗಪ್ಪನವವರಿಂದ ಖರೀದಿಸಿದ್ದು ಸದರಿಯವರ ಹೆಸರಿನಲ್ಲಿ ಪಂಚಾಯಿತಿ ದಾಖಲೆಗಳಲ್ಲಿ ದಾವಾಸ್ತಿಯಲ್ಲಿ ನಮೂದಿಸಿರುವ ಅಳತೆಗಳು ನಮೂದು ಇದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಮುಂದುವರೆದು ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-1 ರಲ್ಲಿಯೂ ಸಹಯಾವುದೇ ಅಳತೆಗಳು ನಮೂದು ಇಲ್ಲ ಎಂದರೆ ಸರಿ. ನಿಪಿ-2 ರಲ್ಲಿರುವ ದಾವಾಸ್ತಿ 3 ಜನರ ಹೆಸರಿಗೆ ಖಾತೆ ಇದ್ದು ಸದರಿ ಖಾತೆಯ ಸಮಯಕ್ಕೆ ಯಾವ ದಾಖಲೆಗಳ ಆಧಾರದ ಮೇಲೆ ಅಳತೆಗಳನ್ನು ನಮೂದಿಸಿದ್ದೀರಿ ಎಂದರೆ ಸಾಕ್ಷಿ ಮುಖ್ತಿಯಾರ್ ನಾಮೆಯನ್ನು ಬರೆದಿದ್ದು ಅದರಲ್ಲಿ ಅಳತೆಗಳನ್ನು ನಮೂದಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಮುಖ್ತಿಯಾರ್ ನಾಮೆಯನ್ನು ಯಾವ ವರ್ಷದಲ್ಲಿ ಬರೆದುಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ. ನಿಪಿ-2 ರಲ್ಲಿ ಸದರಿ ಮುಖ್ತಿಯಾರ್ ನಾಮೆಯ ಆಧಾರದ ಮೇಲೆಖಾತೆ ಬದಲಾವಣೆ ಮಾಡಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ನನ್ನ ತಂದೆ ಸದರಿ ಮ್ಯೂಟೇಶನ್ ಮಾಡುವ 4 ವರ್ಷಗಳ ಹಿಂದೆಯೇ ಮೃತಪಟ್ಟಿರುತ್ತಾರೆ ಎಂದರೆ ಸರಿ. 2017 ರಲ್ಲಿ ದಾವಾಸ್ತಿಯ ಖಾತೆ ಮೊದಲಬಾರಿಗೆ ನನ್ನ ತಾಯಿಯ ಹೆಸರಿಗೆ ಬದಲಾಗಿರುತ್ತದೆ. ಸದರಿ ಮ್ಯೂಟೇಶನ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ಶಾಂತಮ್ಮ 5-6 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ನಮ್ಮ ತಾಯಿ ಜೀವಂತವಿರುವ ಕಾಲಕ್ಕೆ ನನ್ನ ತಾಯಿ ಮತ್ತು ಅವರ ಮಕ್ಕಳ ನಡುವೆ ಯಾವುದೇ ವಿಭಾಗಪತ್ರವಾಗಿರುವುದಿಲ್ಲ. ನಿಪಿ-2 ರಲ್ಲಿ ಉಲ್ಲೇಖವಿರುವಂತೆ 3 ಜನ ಮಕ್ಕಳು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಬರೆಸಿದ್ದು , ಅದರ ಆಧಾರದ ಮೇಲೆ ಮ್ಯೂಟೇಶನ್ ನ್ನು ಮಾಡಿದೆ ಎಂದು ನಿಪಿ-2 ರಲ್ಲಿ ನಮೂದಿಸಿದ್ದು ಸದರಿ ವಿಚಾರದ ಬಗ್ಗೆ ವಿಭಾಗವಾದಕುರಿತು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ನನ್ನ ತಂದೆ ಜಿ ಪಿ ಎ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸರಿದ ಜಿ ಪಿ ಎ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ

ತಮ್ಮ ಪರವಾಗಿ ಹಾಜರುಪಡಿಸಿದ ಪಟ್ಟಿಯನ್ನು ತೋರಿಸಲಾಗಿ ಸದರಿ ಪಟ್ಟಿಯಲ್ಲಿ ಜಿ ಪಿ ಎ ಇಲ್ಲದೆ ಇರುವುದನ್ನು ಸಾಕ್ಷಿ ನೋಡಿ ಖಚಿತ ಪಡಿಸಿಕೊಂಡಿರುತ್ತಾರೆ.

ಹಾಗಾಗಿ ನನ್ನ ತಂದೆ ಜೀವಂತವಿದ್ದ ಕಾಲಕ್ಕೆ ಆಸ್ತಿ ಸಂಖ್ಯೆ 73 ಕ್ಕೆ ಸಂಬಂಧಿಸಿದಂತೆ ಯಾವುದೇ ಜಿ ಪಿ ಎ ಯನ್ನು ಬರೆದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಜಿ ಪಿ ಎ ಆಧಾರದ ಮೇಲೆ ಯಾವುದೇ ಮ್ಯೂಟೇಶನ್ ಸಹ ಆಗಿಲ್ಲ ಎಂದರೆ ಸರಿ. ನನ್ನ ತಂದೆ 1972 ರಲ್ಲಿ ದಾವಾಸ್ತಿಯನ್ನು ಕೊಂಡ ಕಾಲಕ್ಕೆ ಉತ್ತರ ದಿಕ್ಕಿಗೆ 3 ಅಡಿ ಓಣಿ ಇದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ. ದಾವಾಸ್ತಿಯಲ್ಲಿ 2 ಮನೆಗಳು ಇವೆ. ಒಂದು ನಮ್ಮದು ಇನ್ನೊಂದು ನಮ್ಮ ಚಿಕ್ಕಪ್ಪನದು, ನನ್ನ ಚಿಕ್ಕಪ್ಪನ ಮನೆ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ನನ್ನ ಚಿಕ್ಕಪ್ಪನ ಹೆಸರು ದತ್ತುರಾವ್. ಸದರಿ ದತ್ತುರಾವ್ ರವರು ಕಟ್ಟಿರುವ ಮನೆ ಉತ್ತರ ದಕ್ಷಿಣವಾಗಿ 12 ವರೆ ಅಡಿ ಉದ್ದ ಇದೆ. ಸದರಿ 12 ವರೆ ಅಡಿ ಜಾಗ ನನ್ನ ತಂದೆ ನಿಪಿ-1 ರಂತೆ ಖರೀದಿಸಿದ ಆಸ್ತಿಯ ಅರ್ಧ ಭಾಗ ಎಂದರೆ ಸರಿ.

ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ದಾವಾಸ್ತಿಯನ್ನು ಪಾಲುವಿಭಾಗ ಮಾಡಿಕೊಂಡ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಚಿಕ್ಕಪ್ಪನ ಮನೆಯ ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಿಪಿ-2 ನನ್ನ ಚಿಕ್ಕಪ್ಪನ ಆಸ್ತಿಯನ್ನು ಒಳಗೊಂಡಿಲ್ಲ. ನಿಪಿ-2 ರಲ್ಲಿ 3 ಭಾಗಗಳಾಗಿ ತೋರಿಸಿದ್ದು ಅದರಲ್ಲಿ ರಾಮಮೂರ್ತಿ ಬಿನ್ ಶಾಮಮೂರ್ತಿರವರ ಹೆಸರಿಗೆ 2 ಭಾಗಗಳು ಮತ್ತು ಆನಂತ ಮೂರ್ತಿ ಬಿನ್ ಶಾಮಮೂರ್ತಿ ರವರಿಗೆ 1 ಭಾಗ ನಮೂದು ಇದೆ ಎಂದರೆ ಸರಿ. ಸದರಿ 3 ಭಾಗಗಳ ದಕ್ಷಿಣ ದಿಕ್ಕಿಗೆ ನನ್ನ ಚಿಕ್ಕಪ್ಪನ ಆಸ್ತಿ ಬರುತ್ತದೆ. ನಿಪಿ-2 ರಲ್ಲಿ ಉಲ್ಲೇಖಿತವಾದ 3 ಭಾಗಗಳಲ್ಲಿ ದಕ್ಷಿಣ ದಿಕ್ಕಿಗೆ ನನ್ನ ಚಿಕ್ಕಪ್ಪನ ಆಸ್ತಿ ಎಂದು ನಮೂದು ಇರುವುದಿಲ್ಲ ಎಂದರೆ ಸರಿ.

ನಿಪಿ-2 ರಲ್ಲಿ ಉಲ್ಲೇಖಿತವಾದ 3 ಭಾಗಗಳ ಒಟ್ಟು ಉತ್ತರ ದಕ್ಷಿಣದ ಅಳತೆ (6 ಕಾಲು+12 ವರೆ+ 6 ಕಾಲು) ಸೇರಿಸಿದರೆ 25 ಅಡಿ ಅಗುತ್ತದೆ ಎಂದರೆ ಸರಿ. ಸದರಿ 3 ಅಸ್ತಿಗಳ ದಕ್ಷಿಣ ಭಾಗಕ್ಕೆ ಸುಂದರಮ್ಮನವರ ಮನೆ ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ಸದರಿ ಭಾಗಗಳನ್ನು ಉತ್ತರ ದಕ್ಷಿಣವಾಗಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಮ್ಮ ಆಸ್ತಿಯ ದಕ್ಷಿಣ ಭಾಗದ ಚೆಕ್ಕುಬಂದಿ ತೋರಿಸಿರುವ ಸುಂದರಮ್ಮನವರ ಮನೆ 12 ವರೆ ಅಡಿ ಬರುತ್ತದೆ ಎಂದರೆ ಸರಿ. ಹಾಗಾಗಿ ನಿಪಿ-2 ರಲ್ಲಿ ನಮೂದಾಗಿರುವ ಅಳತೆಗಳು ನಮ್ಮ ಅನುಕೂಲಕ್ಕೆ ತಕ್ಕಂತೆ ಪಂಚಾಯತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಮಾಡಿದ ವಿಲ್ ನಂತೆ ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಿಲ್ ನೊಂದಣಿಯಾಗಿರುವುದಿಲ್ಲ, ಸದರಿ ವಿಲ್ ನನ್ನಬಳಿ ಇರುತ್ತದೆ. ಸದರಿ ವಿಲ್ ನ ಕುರಿತು ನನ್ನ ವಾದಪತ್ರದಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲಿ ನಮೂದಿಸಿರುವುದಿಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ  ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.